ಹೈದ್ರಾಬಾದ್ - ಕರ್ನಾಟಕ ಅಭಿವೃದ್ಧಿ ಮಂಡಲಿ

18 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ನಗರಾಭಿವೃದ್ಧಿ ಕಾಡಾ ಮತ್ತು ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರರಿಸುವರೆ?

ಅ) ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಯಾವಾಗಿನಿಂದ ಅಸ್ತಿತ್ವಕ್ಕೆ ಬಂದಿದೆ?

ಆ) ಈ ಮಂಡಳಿ ಅಸ್ತಿತ್ವಕ್ಕೆ ಬಂದ ನಂತರ ಪ್ರತಿವರ್ಷ ಬಿಡುಗಡೆ ಮಾಡಿದ ಹಣ ಎಷ್ಟು? ಹಾಗೂ ಆಯಾಯ ವರ್ಷದಲ್ಲಿ ಖರ್ಚು ಮಾಡಿದ ಹಣವೆಷ್ಟು?

ಇ) 1994ರ ಅಂತ್ಯದ ಮೂರು ತಿಂಗಳಲ್ಲಿ ಖರ್ಚು ಮಾಡಿದ ಹಣವೆಷ್ಟು? (ಪೂರ್ಣ ವಿವರ ನೀಡಲು ಸಾಧ್ಯವೆ?)

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಕಾಡಾ ಮತ್ತು ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಸಚಿವರು) :

ಶಾಸನಬದ್ಧವಾಗಿ ದಿನಾಂಕ 31.12.92ರಿಂದ ಅಸ್ತಿತ್ವಕ್ಕೆ ಬಂದಿದೆ.

(ಕೋಟಿ ರೂ.ಗಳಲ್ಲಿ)

ವರ್ಷ	ಬಿಡುಗಡೆಯಾದ ಹಣ	ಖರ್ಚು ಮಾಡಿದ ಹಣ
1991-92	61.30	19.00
1992-93	64.50	60.57
1993-94	63.72	52.72
1994-95	20.00	37.83*

(ಫೆಬ್ರವರಿ 1995ರ ವರೆಗೆ ಮತ್ತು ಹಿಂದಿನ ವರ್ಷಗಳ ಉಳಿತಾಯವು ಸೇರಿ)

ಇ) ಅನುಬಂಧ 1ರಲ್ಲಿ ತೋರಿಸಲಾಗಿದೆ.

ಅನುಬಂಧ - 1

(ರೂ. ಲಕ್ಷಗಳಲ್ಲಿ)

ಕ್ರ. ಸಂ.	ವಲಯ	ಖರ್ಚು 10:94	11:94	12:94	ಒಟ್ಟು
1.	ರಸ್ತೆ ಮತ್ತು ಸೇತುವೆ	26.17	108.85	44.85	179.87
2.	ಭಾರಿ ಹಾಗೂ ಮಧ್ಯಮ ನೀರಾವರಿ	-	-	0.17	0.17
3.	ಸಣ್ಣ ನೀರಾವರಿ	8.30	3.65	3.02	14.97
4.	ಶಿಕ್ಷಣ	34.33	13.90	27.20	75.43
5.	ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್	3.10	591.00	-	594.10
6.	ಕರ್ನಾಟಕ ನಗರ ನೀರು ಸರಬರಾಜು ಹಾಗೂ ಒಳಚರಂಡಿ			93.69	93.69